**ಭಾರತಕ್ಕೆ ಇಟಾಲಿಯನ್ ಗಣರಾಜ್ಯದ ಉಪ ಪ್ರಧಾನ ಮಂತ್ರಿ ಮತ್ತು ವಿದೇಶಾಂಗ ವ್ಯವಹಾರಗಳು ಮತ್ತು ಅಂತಾರಾಷ್ಟ್ರೀಯ ಸಹಕಾರ ಸಚಿವ ಗೌರವಾನ್ವಿತ ಶ್ರೀ ಆಂಟೋನಿಯೋ ತಜಾನಿ ಅವರ ಭೇಟಿ**

ಡಿಸೆಂಬರ್ 11, 2025

ಉಪ ಪ್ರಧಾನಮಂತ್ರಿ (DPM) ಮತ್ತು ಇಟಾಲಿಯನ್ ಗಣರಾಜ್ಯದ ವಿದೇಶಾಂಗ ವ್ಯವಹಾರಗಳು ಮತ್ತು ಅಂತಾರಾಷ್ಟ್ರೀಯ ಸಹಕಾರ ಸಚಿವ (FM) ಶ್ರೀ ಆಂಟೋನಿಯೋ ತಜಾನಿ 2025 ರ ಡಿಸೆಂಬರ್ 10-11 ರಂದು ಭಾರತಕ್ಕೆ ಭೇಟಿ ನೀಡಿದರು. DPM ತಜಾನಿ ಅವರೊಂದಿಗೆ ಇಟಲಿಯ 50-ಸದಸ್ಯರ ಬಲವಾದ ಬಿಸಿನೆಸ್ ನಿಯೋಗ ಕೂಡಾ ಇತ್ತು. ಈ ವರ್ಷ ಭಾರತಕ್ಕೆ ಇದು ಅವರ ಎರಡನೇ ಭೇಟಿಯಾಗಿದೆ. ಅವರು ಈ ಮೊದಲು 2025 ಏಪ್ರಿಲ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು, ಈ ಸಮಯದಲ್ಲಿ, ಉದ್ಘಾಟನಾ ಭಾರತ-ಇಟಲಿ ಬಿಸಿನೆಸ್, ವಿಜ್ಞಾನ ಮತ್ತು ತಂತ್ರಜ್ಞಾನ ವೇದಿಕೆಯನ್ನು ಆಯೋಜಿಸಲಾಗಿತ್ತು.

2. 2025 ನವೆಂಬರ್‌ನಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ G20 ಶೃಂಗಸಭೆಯ ನೇಪಥ್ಯದಲ್ಲಿ ಇಟಲಿ ಗಣರಾಜ್ಯದ ಮಂತ್ರಿ ಮಂಡಳಿಯ ಅಧ್ಯಕ್ಷೆ ಮಿಸ್ ಜಾರ್ಜಿಯಾ ಮೆಲೋನಿ ಮತ್ತು ಶ್ರೀ ನರೇಂದ್ರ ಮೋದಿ ನಡುವೆ ನಡೆದ ಸಭೆಯನ್ನು DPM ಮತ್ತು FM ತಜಾನಿಯವರ ಈ ಭೇಟಿ ಹಿಂಬಾಲಿಸಿದೆ.

3. ಈ ಭೇಟಿಯ ಸಂದರ್ಭದಲ್ಲಿ, DPM ಮತ್ತು FM ತಜಾನಿ ಅವರು ಪ್ರಧಾನಮಂತ್ರಿಯವರನ್ನು, ವಿದೇಶಾಂಗ ವ್ಯವಹಾರಗಳ ಸಚಿವರು, ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನು ಭೇಟಿ ಮಾಡಿದರು. ಪ್ರಧಾನಿ ಮೋದಿ ಅವರು ಪ್ರಧಾನಿ ಮೆಲೋನಿ ಅವರಿಗೆ ಶುಭಾಶಯಗಳನ್ನು ತಿಳಿಸಿದರು ಮತ್ತು ಭಾರತ-ಇಟಲಿ ದ್ವಿಪಕ್ಷೀಯ ಸಂಬಂಧಗಳ ಸಕಾರಾತ್ಮಕ ಪಥದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

4. EAM ಡಾ. ಎಸ್. ಜೈಶಂಕರ್ ದೆಹಲಿಯಲ್ಲಿ DPM ಮತ್ತು FM ತಜಾನಿಯೊಂದಿಗೆ ನಿಯೋಗ ಮಟ್ಟದ ಮಾತುಕತೆಗಳನ್ನು ನಡೆಸಿದರು ಮತ್ತು ದ್ವಿಪಕ್ಷೀಯ ಸಹಕಾರದ ಸಂಪೂರ್ಣ ವ್ಯಾಪ್ತಿಯ ಬಗ್ಗೆ ಚರ್ಚಿಸಿದರು. ಅವರು ಜಂಟಿ ಕಾರ್ಯತಂತ್ರದ ಕ್ರಿಯಾ ಯೋಜನೆ (JSAP) 2025-29, ವಿಶೇಷವಾಗಿ ವ್ಯಾಪಾರ ಮತ್ತು ಆರ್ಥಿಕತೆ, ರಕ್ಷಣೆ ಮತ್ತು ಭದ್ರತೆ, ಭಯೋತ್ಪಾದನೆ ನಿಗ್ರಹ, ಬಾಹ್ಯಾಕಾಶ, ವಿಜ್ಞಾನ ಮತ್ತು ತಂತ್ರಜ್ಞಾನ, ನಾವೀನ್ಯತೆ, ನವೀಕರಿಸಬಹುದಾದ ಇಂಧನ, ಶಿಕ್ಷಣ ಮತ್ತು ಜನರ ನಡುವಿನ ಸಂಬಂಧಗಳ ಕ್ಷೇತ್ರಗಳಲ್ಲಿ ತೃಪ್ತಿ ವ್ಯಕ್ತಪಡಿಸಿದರು. ಭಯೋತ್ಪಾದನೆಯನ್ನು ಸಮಗ್ರ ಮತ್ತು ನಿರಂತರ ರೀತಿಯಲ್ಲಿ ಎದುರಿಸುವ ಜಂಟಿ ಬದ್ಧತೆಗೆ ಅನುಗುಣವಾಗಿ ಭಯೋತ್ಪಾದನೆಗೆ ಹಣಕಾಸು ಒದಗಿಸುವುದನ್ನು ತಡೆಯಲು ಭಾರತ-ಇಟಲಿ ಜಂಟಿ ಉಪಕ್ರಮವನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಅವರು ಎದುರು

ನೋಡುತ್ತಿದ್ದರು. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿಯನ್ನು ಭಾರತ ಪುನರುಚ್ಚರಿಸಿತು. ಕಡಲ ಡೊಮೇನ್‌ನಲ್ಲಿ ಸುರಕ್ಷತೆ, ಭದ್ರತೆ ಮತ್ತು ಬೆಳವಣಿಗೆಗೆ ಸಹಯೋಗವನ್ನು ಹೆಚ್ಚಿಸಲು ಎರಡೂ ಕಡೆಯವರು ಕಡಲ ಭದ್ರತಾ ಸಂವಾದವನ್ನು ಸ್ಥಾಪಿಸಲು ಕೆಲಸ ಮಾಡುತ್ತಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವರು ಹಾಗೂ DPM ಮತ್ತು FM ತಜಾನಿ ಅವರು ಕೌಶಲ್ಯ ಮತ್ತು ಚಲನಶೀಲತೆಯಲ್ಲಿ ಸಹಯೋಗವನ್ನು ಮತ್ತಷ್ಟು ಬಲಪಡಿಸುವ ಬಗ್ಗೆ, ವಿಶೇಷವಾಗಿ ಆರೋಗ್ಯ ಕ್ಷೇತ್ರದಲ್ಲಿ ಈ ಸಂಬಂಧ ಕೆಲಸ ಮಾಡುವ ಬಗ್ಗೆ ಒತ್ತಿ ಹೇಳಿದರು. ಅವರು ಇಂಡೋ-ಪೆಸಿಫಿಕ್, ಉಕ್ರೇನ್, ಪಶ್ಚಿಮ ಏಷ್ಯಾ / ಮಧ್ಯಪ್ರಾಚ್ಯ ಮತ್ತು ಪರಸ್ಪರ ಆಸಕ್ತಿಯ ಇತರ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳಲ್ಲಿ ಪ್ರಮುಖ ಬೆಳವಣಿಗೆಗಳ ಬಗ್ಗೆ ಚರ್ಚಿಸಿದರು.

5. NSA ಶ್ರೀ ಅಜಿತ್ ದೋವಲ್ ಅವರೊಂದಿಗೆ DPM ಮತ್ತು FM ತಜಾನಿ ಅವರ ಸಭೆಯು ಭದ್ರತಾ ಸಹಕಾರ ಮತ್ತು ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಮೇಲೆ ಗಮನಹರಿಸಿತ್ತು. ಭಾರತ ಮಧ್ಯಪ್ರಾಚ್ಯ ಯುರೋಪ್ ಆರ್ಥಿಕ ಕಾರಿಡಾರ್ (IMEEC) ಅನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ತಮ್ಮ ಬದ್ಧತೆಯನ್ನು ಎರಡೂ ಕಡೆಯವರು ಪುನರುಚ್ಚರಿಸಿದರು.

6. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಶ್ರೀ ಪಿಯೂಷ್ ಗೋಯಲ್ ಅವರು ಡಿಸೆಂಬರ್ 11 ರಂದು ಮುಂಬೈನಲ್ಲಿ DPM ಮತ್ತು FM ತಜಾನಿ ಅವರೊಂದಿಗೆ ದ್ವಿಪಕ್ಷೀಯ ಸಭೆಯನ್ನು ನಡೆಸಿದರು ಹಾಗೂ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಹೆಚ್ಚಿಸುವ ಮತ್ತು ವೈವಿಧ್ಯಮಯಗೊಳಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು. ಅವರು ಭಾರತ-ಇಟಲಿ ಬಿಸಿನೆಸ್ ಫೋರಂನ ಅಧ್ಯಕ್ಷತೆಯನ್ನು ಸಹ ವಹಿಸಿದ್ದರು. ಭೇಟಿಯ ಸಮಯದಲ್ಲಿ, ಆಟೋಮೋಟಿವ್, ತ್ಯಾಜ್ಯದಿಂದ ಇಂಧನ ಮತ್ತು ನವೀಕರಿಸಬಹುದಾದವು, ಕ್ರೀಡಾ ತಂತ್ರಜ್ಞಾನಗಳು, ಕೃಷಿ-ಆಹಾರ ಮತ್ತು ಸಂಪರ್ಕದ ಕ್ಷೇತ್ರಗಳಲ್ಲಿ ಹಲವಾರು ಬಿಸಿನೆಸ್ ದುಂಡು ಮೇಜಿನ ಸಭೆಗಳನ್ನು ಆಯೋಜಿಸಲಾಯಿತು. ಇಬ್ಬರೂ ಸಚಿವರು ಭಾರತೀಯ ಯುನಿಕಾರ್ನ್ ಸಂಸ್ಥೆಗಳ ಮುಖ್ಯಸ್ಥರನ್ನು ಭೇಟಿಯಾಗಿ ಭಾರತ-ಇಟಲಿ ನಾವೀನ್ಯತೆ ಉಪಕ್ರಮದ ಬಗ್ಗೆ ಚರ್ಚಿಸಿದರು.

7. ಭಾರತ-ಇಟಲಿ ದ್ವಿಪಕ್ಷೀಯ ಸಂಬಂಧಗಳು ಮೇಲ್ಮುಖ ಪಥದಲ್ಲಿದ್ದು, ನಿಯಮಿತ ಉನ್ನತ ಮಟ್ಟದ ಕಾರ್ಯಕ್ರಮಗಳು, ಸಚಿವರ ಮಟ್ಟದ ಸಂವಾದಗಳು ಮತ್ತು ಖಾಸಗಿ ವಲಯ ಮಟ್ಟದಲ್ಲಿ ಬೆಳೆಯುತ್ತಿರುವ ಸಂವಹನಗಳು ಭಾರತ-ಇಟಲಿ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಿವೆ ಮತ್ತು ವೈವಿಧ್ಯಗೊಳಿಸಿವೆ.

ನವದೆಹಲಿ

ಡಿಸೆಂಬರ್ 11, 2025